# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

OFFICE OF THE DEPUTY TAHASILDAR, THAMBRAHALLI-583224

ಎ.ವಿಲೇ.ನಂ.ಕಂ.ಪಹಣಿ.ವಿವಾದ/38/2015 16 ದಿನಾಂಕ: 28 .05.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

**ವಾದಿ (ಶ್ರೀ/ಶ್ರೀಮತಿ)**

ಅಜಯ್‌ಸರಫ್ ಮತ್ತು ಅಂಜುಸರಫ್ ಡೈರೆಕ್ಟರ್ಸ್ ಆಫ್ ಆರ್‌ಬಿಎಸ್‌ಎಸ್‌ಎನ್ ಪ್ರೈ ಲಿಮಿಟೆಡ್ ಗಂಗೇನಹಳ್ಳಿ ಬೆಂಗಳೂರು ಇವರ ಜಿಪಿಎಫ್ ಹೋಲ್ಡರ್ ಶ್ರೀ ಗೋಗಿ ಜೀನದತ್ತ ತಂದೆ ಪದ್ಮರಾಜಪ್ಪ ಜೆ.ಪಿ.ನಗರ ಬಳ್ಳಾರಿ ರಸ್ತೆ ಹೊಸಪೇಟೆ

**ಪ್ರತಿವಾದಿ (ಶ್ರೀ/ಶ್ರೀಮತಿ)**

ಕೆಂಚಮ್ಮ ಎ.ಕೆ. ಗಂಡ ಲೇಟ್ ಬಸವರಾಜ ಎ.ಕೆ. ವಾಸ ವರದಾಪುರ ಗ್ರಾಮ ಹಬೊ ಹಳ್ಳಿ ತಾಲೂಕು

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ವರದಾಪುರ | 352/1 | 1.80 ಎಕರೆ |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 352/1 ವಿಸ್ತೀರ್ಣ 1.80 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ದಸ್ತಾವೇಜು ಪತ್ರದ ಪ್ರಕಾರ ಹಕ್ಕುಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್39/2014-15 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.02.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಶಿವಮ್ಮ ಗಂಡ ತಿಮ್ಮಪ್ಪ ಇವರ ಆಸ್ತಿಯಾಗಿದ್ದು ಸದರಿಯವರಿಂದ ದಿನಾಂಕ:20.11.2015 ರಂದು ಕ್ರಯ ನೊಂದಣಿ ದಸ್ತಾವೇಜು ಸಂಖ್ಯೆ 2967/2015-16 ರ ಮೂಲಕ ಅಜಯ್‌ಸರಫ್ ಮತ್ತು ಅಂಜುಸರಫ್ ಡೈರೆಕ್ಟರ್ಸ್ ಆಫ್ ಆರ್‌ಬಿಎಸ್‌ಎಸ್‌ಎನ್ ಪ್ರೈ ಲಿಮಿಟೆಡ್ ಗಂಗೇನಹಳ್ಳಿ ಬೆಂಗಳೂರು ಇವರ ಜಿಪಿಎಫ್ ಹೋಲ್ಡರ್ ಶ್ರೀ ಗೋಗಿ ಜೀನದತ್ತ ತಂದೆ ಪದ್ಮರಾಜಪ್ಪ ಇವರು ಕ್ರಯಕ್ಕೆ ಪಡೆದಿದ್ದು ಸದರಿ ಕ್ರಯ ಪತ್ರದ ಪ್ರಕಾರ ಖಾತೆ ಮಾಡಿಕೊಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು ಪ್ರಸ್ತುತ ಹಕ್ಕುಬದಲಾವಣೆಗೆ ದಿನಾಂಕ:08.12.2015 ರಂದು ಲಿಖಿತ ತಕರಾರು ಸಲ್ಲಿಸಿದ್ದು ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ತನ್ನ ಗಂಡನ ಪಿತ್ರಾರ್ಜಿತ

30/7/16

ಆಸ್ತಿಯಾಗಿದ್ದು ಸದರಿ ಜಮೀನು ಇಂದಿನವರೆಗೂ ತಮ್ಮ ಹಕ್ಕು ಅಧೀನದಲ್ಲಿರುವುದಾಗಿ ಪ್ರಸ್ತುತ ಜಮೀನನ್ನು ತನ್ನ ಅತ್ತೆಯವರಾದ ಶಿವಮ್ಮ ಗಂಡ ತಿಮ್ಮಪ್ಪ ಇವರು ತನಗೆ ತಿಳಿಸದೇ ಕಾನೂನು ಬಾಹೀರವಾಗಿ ವಾದಿಗಳಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಕಾರಣ ಸದರಿ ವ್ಯಾಜ್ಯದ ಜಮೀನಿನಲ್ಲಿ ತನಗೂ ಕಾನೂನುಬದ್ದವಾದ ಹಕ್ಕು ಇರುವುದರಿಂದ ಖಾತೆ ಬದಲಾವಣೆ ಮಾಡದಂತೆ ಕೋರಿರುತ್ತಾರೆ.

ಉಭಯ ಪಕ್ಷಕಾರರು ಸತತವಾಗಿ ವಿಚಾರಣೆಗೆ ಗೈರು ಹಾಜರಾಗಿದ್ದು ಅಗತ್ಯ ದಾಖಲೆಗಳನ್ನು ಹಾಜರುಪಡಿಸುವಲ್ಲಿ ವಿಫಲರಾಗಿರುತ್ತಾರೆ. ಉಭಯರ ಸತತ ಗೈರು ಹಾಜರಾತಿಯಿಂದಾಗಿ ಪ್ರಸ್ತುತ ಪ್ರಕರಣದಲ್ಲಿ ಆಸಕ್ತಿ ಇಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಹಾಗೂ ಪ್ರಕರಣದ ಅಂತಿಮ ತೀರ್ಮಾನಕ್ಕಾಗಿ ಕೆಲ ದಾಖಲೆಗಳು ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಉಭಯರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸಿ ಆದೇಶಿಸುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ ಆದೇಶ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ವರದಾಪುರ ಗ್ರಾಮದ ಸ.ನಂ. 352/1 ವಿಸ್ತೀರ್ಣ 1.80 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರು ಅಗತ್ಯ ದಾಖಲೆಗಳೊಂದಿಗೆ ಪ್ರದತ್ತ ಪ್ರಾಧೀಕಾರಕ್ಕೆ ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳುವಂತೆ ಸೂಚಿಸುತ್ತಾ ಪ್ರಸ್ತುತ ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 28.07.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.